**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಎಂಟನೇ ಅಧಿವೇಶನ**
**(ಮುಂದುವರೆದ ಉಪವೇಶನಗಳು)**

# ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 2015
**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 40)**

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು (1987ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ 34) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (ಎಸ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಸ್) "ನಗರ ಪ್ರದೇಶ" ಎಂದರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ಘೋಷಿಸಿದ ಯಾವುದೇ ಸ್ಥಳೀಯ ಯೋಜನಾ ಪ್ರದೇಶ."

**3. 3ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) (ಡಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಡಿ) ಸರ್ಕಾರವು ನಾಮನಿರ್ದೇಶಿಸಿದ, ಸ್ಥಳೀಯ ಯೋಜನಾ ಪ್ರದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಪ್ರತಿನಿಧಿಸುವ ಕರ್ನಾಟಕ ವಿಧಾನಸಭೆಯ ಒಬ್ಬರಿಗಿಂತ ಹೆಚ್ಚಲ್ಲದ ಸದಸ್ಯರು ಮತ್ತು ಸ್ಥಳೀಯ ಯೋಜನಾ ಪ್ರದೇಶದ ಮತದಾರನಾಗಿ ನೋಂದಾಯಿಸಿರುವ ಕರ್ನಾಟಕ ವಿಧಾನ ಪರಿಷತ್ತಿನ ಒಬ್ಬ ಸದಸ್ಯರು:

ಪರಂತು, ಸ್ಥಳೀಯ ಯೋಜನಾ ಪ್ರದೇಶವನ್ನು ಪ್ರತಿನಿಧಿಸುವ ಕರ್ನಾಟಕ ವಿಧಾನಮಂಡಲದ ಸದಸ್ಯರು ಒಬ್ಬರಿಗಿಂತ ಹೆಚ್ಚಿರುವ ಸಂದರ್ಭದಲ್ಲಿ ಅಂಥ ನಾಮನಿರ್ದೇಶಿತ ಸದಸ್ಯನ ಅವಧಿಯು ಸರದಿಯ ಮೂಲಕ ಒಂದು ವರ್ಷವಾಗಿರತಕ್ಕದ್ದು."

(ii) (ಎಫ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಸ್ಥಳೀಯ ಯೋಜನಾ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ವಿದ್ಯುತ್ ಸರಬರಾಜು ಕಂಪನಿಯ ಒಬ್ಬ ಪ್ರತಿನಿಧಿ;

(ಎಫ್ಎ) ಸರ್ಕಾರವು ನಾಮನಿರ್ದೇಶಿಸಿದ ಸ್ಥಳೀಯ ಯೋಜನಾ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರ್; "

(iii) (ಕೆ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಕೆಎ) ಸಂಬಂಧಿಸಿದ ನಗರ ಪ್ರದೇಶಗಳ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಒಬ್ಬ ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿ- ಪದನಿಮಿತ್ತ ಸದಸ್ಯ;

(ಕೆಬಿ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಒಬ್ಬ ಪ್ರತಿನಿಧಿ."

(iv) (ಎನ್) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಒ) ಜಿಲ್ಲೆಯ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಥವಾ ಆತನ ಪ್ರತಿನಿಧಿ- ಪದನಿಮಿತ್ತ ಸದಸ್ಯ,"

**4. 16ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 16ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದಲ್ಲಿ,-

(i) "ಹದಿನೈದಕ್ಕೆ" ಎಂಬ ಪದಕ್ಕೆ "ಹತ್ತಕ್ಕೆ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಹತ್ತಕ್ಕೆ" ಎಂಬ ಪದಕ್ಕೆ "ಐದಕ್ಕೆ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ನ್ನು (1987ರ ಕರ್ನಾಟಕ ಅಧಿನಿಯಮ 34) ಈ ಮುಂದಿನವುಗಳಿಗಾಗಿ ಎಂದರೆ:-

(1) ಸಂಬಂಧಿಸಿದ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ, ಕರ್ನಾಟಕ ರಾಜ್ಯ ವಿಧಾನ ಮಂಡಲದ ಸದಸ್ಯರುಗಳನ್ನು, ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಯ ಒಬ್ಬ ಪ್ರತಿನಿಧಿ, ಸಂಬಂಧಿಸಿದ ನಗರ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಒಬ್ಬ ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಒಬ್ಬ ಪ್ರತಿನಿದಿ, ಜಿಲ್ಲೆಯ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಥವಾ ಆತನ ಪ್ರತಿನಿಧಿ ಮತ್ತು ಸ್ಥಳೀಯ ಯೋಜನಾ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರ್ ಇವರನ್ನು ಸೇರಿಸುವುದಕ್ಕೆ ಉಪಬಂಧ ಕಲ್ಪಿಸಲು; ಮತ್ತು

(2) ನಗರಾಭಿವೃದ್ಧಿ ಪ್ರಾಧಿಕಾರದ ಅಭಿವೃದ್ಧಿ ಸ್ಕೀಮುಗಳಲ್ಲಿ ಉದ್ಯಾನಗಳು ಮತ್ತು ಮುಕ್ತ ಸ್ಥಳಗಳಿಗಾಗಿ ಮೀಸಲಿಡಬೇಕಾದ ಪ್ರದೇಶವನ್ನು ಪರಿಷ್ಕರಿಸುವುದಕ್ಕೆ,

-ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿನಯ ಕುಮಾರ್ ಸೊರಕೆ**
ನಗರಾಭಿವೃದ್ಧಿ ಸಚಿವರು

**ಎಸ್. ವೈ. ಕುಳಗೇರಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

### ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34) ಉದ್ಧೃತ ಭಾಗ

Xx xx xx

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

Xx xx xx

(ಎಸ್) "ನಗರ ಪ್ರದೇಶ" ಎಂದರೆ ಒಂದು ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿರುವ ಯಾವುದೇ ಸ್ಥಳೀಯ ಪ್ರದೇಶ ಮತ್ತು ಸರ್ಕಾರವು ಆಗಿಂದಾಗ್ಗೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಸ್ಥಳೀಯ ಪ್ರಾಧಿಕಾರದ ಪರಿಮಿತಿಗಳಿಗೆ ಹೊಂದಿಕೊಂಡಿರುವ ಅಂಥ ಇತರ ಪ್ರದೇಶ;

Xx xx xx

**3. ಪ್ರಾಧಿಕಾರದ ರಚನೆ ಮತ್ತು ನಿಗಮನ.**-

Xx xx xx

(3) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ :-

Xx xx xx

(ಡಿ) ನಗರ ಪ್ರದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಪ್ರತಿನಿಧಿಸುವ, ಕರ್ನಾಟಕ ವಿಧಾನಸಭೆಯ ಸದಸ್ಯರು ಮತ್ತು ಸಂಬಂಧಪಟ್ಟ ನಗರ ಪ್ರದೇಶದ ಖಾಯಂ ನಿವಾಸಿಗಳಾಗಿರುವ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು ;

Xx xx xx

(ಎಫ್) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಒಬ್ಬ ಪ್ರತಿನಿಧಿ ;

Xx xx xx

(ಕೆ) ಜಿಲ್ಲಾ ಆರೋಗ್ಯಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಒಬ್ಬ ಅಧಿಕಾರಿ ;

Xx xx xx

(ಎನ್) ಕಮಿಷನರು, ಪದನಿಮಿತ್ತ :

ಪರಂತು, ಸ್ಥಳೀಯ ಪ್ರಾಧಿಕಾರವು ರದ್ದುಗೊಂಡ ಅವಧಿಯಲ್ಲಿ, ಅಥವಾ ಯಾವೊಬ್ಬ ಆಡಳಿತಗಾರನು ನೇಮಕಗೊಂಡಲ್ಲಿ, ಆಡಳಿತಗಾರನು, ಸ್ಥಳೀಯ ಪ್ರಾಧಿಕಾರಿಗಳ ಪೈಕಿಯಿಂದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು;

Xx xx xx

**16. ಒಂದು ಅಭಿವೃದ್ಧಿ ಸ್ಕೀಮಿನಲ್ಲಿ ಉಪಬಂಧ ಕಲ್ಪಿಸಬೇಕಾದ ವಿವರಗಳು.-** 15ನೇ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಅಭಿವೃದ್ಧಿ ಸ್ಕೀಮು,-

(1) ಯೋಜನೆಯಲ್ಲಿ ಸಮಾವೇಶವಾದ ಪ್ರದೇಶದ ಪರಿಮಿತಿಗಳೊಳಗೆ,-

Xx xx xx

(ಡಿ) ಲೇಔಟಿನ ಒಟ್ಟು ಪ್ರದೇಶದ ಶೇಕಡಾ ಹದಿನೈದಕ್ಕೆ ಕಡಿಮೆಯಿಲ್ಲದ ಪ್ರದೇಶವನ್ನು ಸಾರ್ವಜನಿಕ ಉದ್ಯಾನಗಳು ಮತ್ತು ಆಟದ ಮೈದಾನಗಳಿಗಾಗಿ ಮತ್ತು ಲೇಔಟಿನ ಒಟ್ಟು ಪ್ರದೇಶದ ಶೇಕಡ ಹತ್ತಕ್ಕೆ ಕಡೆಮೆಯಿಲ್ಲದ ಹೆಚ್ಚಿನ ಪ್ರದೇಶವನ್ನು ನಾಗರಿಕ ಸೌಲಭ್ಯಗಳಿಗಾಗಿ ಮೀಸಲಿಡುವುದಕ್ಕಾಗಿ,

Xx xx xx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ 669, 750–ಪ್ರತಿಗಳು 19ನೇ ನವೆಂಬರ್, 2015

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**EIGHTH SESSION**

**(ADJOURNED MEETINGS)**

# THE KARNATAKA URBAN DEVELOPMENT AUTHORITIES (AMENDMENT) BILL, 2015

**(L.A. Bill No. 40 of 2015)**

A Bill further to amend the Karnataka Urban Development Authorities Act, 1987.

Whereas it is expedient further to amend the Karnataka Urban Development Authorities Act, 1987 (Karnataka Act 34 of 1987), for the purposes hereinafter appearing;

Be it enacted by the Karnataka State Legislature in the sixty sixth year of the Republic of India, as follows:-

**1. Short title and commencement.-** (1) This Act may be called the Karnataka Urban Development Authorities (Amendment) Act, 2015

(2) It shall come into force at once.

**2. Amendment of section 2.-** In the Karnataka Urban Development Authorities Act, 1987 (Karnataka Act 34 of 1937) (hereinafter referred to as the principal Act), in section 2, for sub-clause (s) the following shall be substituted, namely:-

"(s) 'Urban Area' means any Local planning area declared under the Karnataka Town and Country Planning Act, 1961 (Karnataka Act No 11 of 1963)."

**3. Amendment of section 3.-** In section 3 of the Principal Act, , in sub-section (3),-

(i) for sub-clause (d) the following shall be substituted, namely:-

"(d) not more than one member of the Karnataka Legislative Assembly representing part or whole of the Local planning area and one member of the Karnataka Legislative Council registered as voter in the local planning area nominated by the Government:

Provided that in case the members of the State Legislature are more than one representing the Local Planning area the term of such nominated member shall be for a period of one year by rotation.

(ii) for clause (f), the following shall be substituted, namely:-

"(f) a representative of the Electricity supply company having jurisdiction over the local planning area.

(fa) a Deputy Registrar of Co-operative Societies having jurisdiction over the local planning area nominated by the Government;"

(iii)after clause (k), the following shall be inserted, namely:-

"(ka) a territorial Deputy Conservator of Forest having jurisdiction over the urban areas concerned - ex-officio member;

(kb) a representative of the Karnataka State Pollution Control Board."

(iv) after clause (n), the following shall be inserted, namely:-

"(o) the Chief Executive Officer of the Zilla Panchayath having jurisdiction over the District or his representative - ex-officio,"

**4. Amendment of section 16.-** In section 16 of the principal Act, in sub-section (1), in clause (d),-

(i) for the words "fifteen" the words "ten" shall be substituted; and

(ii) for the words "ten" the words "five" shall be substituted.

## STATEMENT OF OBJECTS AND REASONS

It is considered necessary to amend the Karnataka Urban development Authorities Act, 1987 (Karnataka Act 34 of 1987),-

(1) to provide for inclusion of the members of the Karnataka State legislature, a representative of respective electricity supply company, a territorial Deputy Conservator of Forest having jurisdiction over the urban area concerned, a representative of the Karnataka State Pollution Control Board, the Chief Executive Officer of the Zilla Panchayat having jurisdiction over the District or his representative and a Deputy Registrar of Co-operative Societies having jurisdiction over the local planning area in the respective Urban Development Authority; and

(2) to revise the area to be reserved for parks and open spaces in the development schemes of Urban Development Authority.

Hence the Bill,

## FINANCIAL MEMORANDUM

There is no extra expenditure involved in the proposed legislative measure.

**VINAYA KUMAR SORAKE**
Minister for Urban Development

**S.Y. KULAGERI**
Secretary (I/C)
Karnataka Legislative Assembly

## ANNEXURE

## EXTRACT FROM THE KARNATAKA URBAN DEVELOPMENT AUTHORITIES ACT, 1987 (KARNATAKA ACT 34 OF 1987)

**XX** **XX** **XX**

**2. Definitions.-** XX XX XX

(s) "urban area" means any local area which is within the jurisdiction of a local authority and includes such other area adjacent to the limits of the local authority as the Government may, from time to time, by notification specify;

**XX** **XX** **XX**

**3. Constitution and incorporation of the Authority.-** XX XX XX

(3) The Authority shall consist of the following members, namely :-

(d) members of the Karnataka Legislative Assembly representing a part or whole of the urban area and members of the Karnataka Legislative Council who are the permanent residents of the urban area concerned

(e) a representative of the Karnataka Urban Water Supply and Drainage Board ;

(f) a representative of the Karnataka Electricity Board ;

**XX** **XX** **XX**

**16. Particulars to be provided for in a development scheme.-**
Every development scheme under section 15,-

/

(1) shall within the limits of the area comprised in the scheme, provide for,-

(a) XX XX XX

(b) XX XX XX

(c) XX XX XX

(d) the reservation of not less than fifteen per cent of the total area of the layout for public parks and play grounds and an additional area of not less than ten per cent of the total area of the layout for civic amenities.

**XX** **XX** **XX**

Government Press, Vikasa Soudha, Bengaluru, P7, W.D. , Copies 750, 19th, 2015